ಎಮ್.ವಿ.ಸಿ. ನಂ.55/2025

PW-1

ದಿನಾಂಕಃ 04-02-2026.

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟಿ ಸವಾಲುಃ 2 ನೇ ಎದುರುದಾರರ ಪರ ಶ್ರೀ SVP ಮಾನ್ಯ ವಕೀಲರಿಂದಃ**

1 ನೇ ಅರ್ಜಿದಾರರು ನನ್ನ ತಾಯಿ ಹಾಗೂ ನಾನು ಹಾಗೂ 2 ರಿಂದ 5 ನೇ ಅರ್ಜಿದಾರರರು ಅಣ್ಣ ತಮ್ಮಂದಿರು ಎಂದರೆ ಸರಿ. 7 ನೇ ಅರ್ಜಿದಾರರು ನನ್ನ ತಂದೆಯ ತಾಯಿಯಾಗಿರುತ್ತಾರೆ. ನನಗೆ ಅಕ್ಕ ತಂಗಿಯರು ಇರುವುದಿಲ್ಲ. ನಾನು ಬಿ.ಎ. ಮೂರನೇ ಸೆಮಿಸ್ಟರ ನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದೇನೆ. ನಾನು ಬಿ.ಎ. ಮೂರನೇ ಸೆಮಿಸ್ಟರ ನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದೇನೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಆದರೆ ಹಾಜರುಪಡಿಸುತ್ತೇನೆ. 2 ರಿಂದ 5 ನೇ ಅರ್ಜಿದಾರರು ಕೂಡಾ ವಿದ್ಯಾರ್ಥಿಗಳು ಆಗಿರುತ್ತಾರೆ ಎಂದರೆ ಸರಿ ಆದರೆ ನಾನು ಸದರಿಯವರ ಶಾಲಾ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ಹಾಗೂ 2 ರಿಂದ 5 ನೇ ಅರ್ಜಿದಾರರು ವಿದ್ಯಾರ್ಥಿಗಳಾಗದೇ ದುಡಿಯುತ್ತಿದ್ದೇವೆ ಎಂದರೆ ಸರಿಯಲ್ಲ.

2. ಸದರಿ ಅಪಘಾತವಾದ ದಿನದಂದು ನನ್ನ ತಂದೆ ಜೊತೆಗೆ 2 ನೇ ಅರ್ಜಿದಾರರು ಇದ್ದರು. ನನ್ನ ತಂದೆಗೆ ಸದರಿ ಅಪಘಾತವಾದ ನಂತರ ತಕ್ಷಣವೇ ಅವರನ್ನು ಶಹಾಪೂರಿನ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಸೇರಿಸಿರುತ್ತೇವೆ ಎಂದರೆ ಸರಿ. ನನ್ನ ತಂದೆಗೆ ಸದರಿ ಆಸ್ಪತ್ರೆಗೆ ಸೇರಿಸಿದಾಗ ನಾನು, ನನ್ನ ತಮ್ಮ 2 ನೇ ಅರ್ಜಿದಾರರು, ಆಟೋ ಚಾಲಕ ಹಾಗೂ ನಮ್ಮ ಊರಿನವರಾದ ಶ್ರೀ ಶಿಶುಪಾಲರೆಡ್ಡಿ ಹಾಗೂ ಮಹಿಪಾಲ ರೆಡ್ಡಿ ಹಾಜರಿದ್ದೇವು. ಸದರಿ ಸರ್ಕಾರಿ ಆಸ್ಪತ್ರೆಯಲ್ಲಿ ನಮ್ಮ ತಂದೆ 10-15 ನಿಮೀಷಗಳವರೆಗೆ ಇದ್ದು ಅವರಿಗೆ ಹೆಚ್ಚಿನ ಗಾಯವಾಗಿದ್ದರಿಂದ ಅವರನ್ನು ಕಲಬುರಗಿಯ United Hospital ಗೆ ಕರೆದುಕೊಂಡು ಹೋಗಿರುತ್ತೇವೆ. ಸದರಿ ಸರ್ಕಾರಿ ಆಸ್ಪತ್ರೆಗೆ ನಮ್ಮ

ತಂದೆಯವರನ್ನು ಕರೆದುಕೊಂಡು ಹೋಗುವ ಮುಂಚಿತವಾಗಿ ಪೊಲೀಸರು ಅಲ್ಲಿ ಇದ್ದಿದ್ದರು. ಪೊಲೀಸರು ಸದರಿ ಸರ್ಕಾರಿ ಆಸ್ಪತ್ರೆಯಲ್ಲಿ ನನ್ನದಾಗಲೀ ಅಥವಾ ನನ್ನ ತಂದೆಯವರದಾಗಲೀ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ. ಸದರಿ United hospital ನಲ್ಲಿ ವೈದ್ಯರು ಪೊಲೀಸರಿಗೆ ತಿಳಿಸದೇ ನಮ್ಮ ತಂದೆಗೆ ಚಿಕಿತ್ಸೆಯನ್ನು ಪ್ರಾರಂಭಿಸಿರುತ್ತಾರೆ. ಸದರಿ united hospital ವೈದ್ಯರು ನನಗೆ ಸದರಿ ಅಪಘಾತದ ಬಗ್ಗೆ ಕೇಳಿದ್ದು ನಾನು ಅವರಿಗೆ ವಿವರಿಸಿರುತ್ತೇನೆ. ಸದರಿ united hospital, kalaburgi ಯಲ್ಲಿ ನನ್ನ ತಂದೆಯವರು ಎರಡು ದಿನಗಳವರೆಗೆ ದಾಖಲು ಮಾಡಿರುತ್ತೇವೆ. ನಾನು united hospital ನವರು ಕೊಟ್ಟಿರುವ discharge summary ನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸದರಿ united hospital ಯು ಕಲಬುರಿಗಿಯ ತಿಮ್ಮಾಪೂರ ಚೌಕನಲ್ಲಿರುತ್ತದೆ ಎಂದರೆ ಸರಿ. ಸದರಿ ಆಸ್ಪತ್ರೆಯಲ್ಲಿ ಎಲ್ಲಾ ಬಿಲ್ಲುಗಳನ್ನು computerized ಇದ್ದು ಕೈ ಬರಹದಲ್ಲಿ ಇರುವುದಿಲ್ಲ ಎಂದರೆ ಸರಿ. ನಿಪಿ.9 ರ ಮೆಡಿಕಲ್ prescriptions ಗಳನ್ನು ನಾನು ಸಲ್ಲಿಸಿರುವುದಿಲ್ಲ. ನಮ್ಮ ತಂದೆಯವರಿಗೆ ಸದರಿ united hospital ನಲ್ಲಿ ಯಾವ ತರಹದ ಚಿಕಿತ್ಸೆಯನ್ನು ಕೊಡಲಾಗಿರುತ್ತದೆ ಎಂದು ತೋರಿಸಲು case sheet ನ್ನು ಹಾಜರುಪಡಿಸಿರುವುದಿಲ್ಲ. ಹೆಚ್ಚಿನ ಪರಿಹಾರದ ಹಣವನ್ನು ಪಡೆಯಲು ನಿಪಿ.9 ರಂತೆ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ, ನಿಪಿ.9 ಕ್ಕೂ ಹಾಗೂ ನಮಗೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಕಾಲವಾಗುವುದಕ್ಕೂ ಹಾಗೂ ಸದರಿ ಅಪಘಾತಕ್ಕೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ಪರಿಹಾರದ ಹಣವನ್ನು ಪಡೆಯಲು ಪೊಲೀಸರ ಜೊತೆ ಶಾಮಿಲಾಗಿ 3- 4 ದಿನಗಳ ಕಾಲ ವಿಳಂಬವಾಗಿ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

3. ಸದರಿ ಅಪಘಾತವಾದ ದಿನದಂದು ಸದರಿ ಆಟೋವನ್ನು ಓಡಿಸುತ್ತಿದ ಶ್ರೀ ಮಹಾರಾಜ ತಂದೆ ಚಂದ್ರಕಾಂತ ಇವರು ನಮ್ಮ ಊರಿನವಾಗಿದ್ದು ಅವರ ಪರಿಚಯ ನಮಗೆ

ಇರುತ್ತದೆ. ಸದರಿ ಆಟೋದ ಮಾಲಿಕರು ಯಾರು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಆಟೋ ಚಾಲಕ DL ನ್ನು ಹೊಂದಿರಲಿಲ್ಲ ಎಂದು ಅವರ ಮೇಲೆ ಪೊಲೀಸರು ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಆದ್ದರಿಂದ 2 ನೇ ಎದುರುದಾರರು ನಮಗೆ ಯಾವುದೇ ಪರಿಹಾರದ ಹಣವನ್ನು ಕೊಡುವ ಭಾದ್ಯತೆಯನ್ನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ಸದರಿ ಅಪಘಾತವಾಗುವ ಸಂದರ್ಭದಲ್ಲಿ 49 ವಯಸ್ಸಾಗಿದ್ದು ಅವರು ಪ್ರತಿ ತಿಂಗಳು ರೂ.50,000/-ಗಳ ಅದಾಯವನ್ನು ಹೊಂದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯವರು ಕಿರಾಣಿ ಹಾಗೂ ಕಾಯಿಪಲ್ಯೆಯನ್ನು ಒಂದೆ ಕಡೆ ಹೋತಪೇಠ ದಲ್ಲಿ ಮಾರಾಟ ಮಾಡುತ್ತಿದ್ದರು ಎಂದರೆ ಸರಿ. ಕಿರಾಣಿ ಅಂಗಡಿಯನ್ನು ಹಾಗೂ ಕಾಯಿಪಲ್ಯೆ ಮಾರಾಟ ಮಾಡಲು ಸಂಬಂದಪಟ್ಟ ಅಧಿಕಾರಿಗಳಿಂದ ಪರವಾನಿಗೆಯನ್ನು ಪಡೆಯಬೇಕು ಎಂದರೆ ಸರಿ. ನನ್ನ ತಂದೆಯವರು ಸದರಿ ವ್ಯಾಪಾರವನ್ನು ಮಾಡಲು ಪರವಾನಿಗೆಯನ್ನು ಹೊಂದಿದ್ದು ಅದರ ಪ್ರತಿಯನ್ನು ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ. ನನ್ನ ತಂದೆಯವರು ಕಿರಾಣಿ ಹಾಗೂ ಕಾಯಿಪಲ್ಯೆ ಮಾರುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೃತ ತಂದೆಯವರು ಆಧಾರ ಕಾರ್ಡ ಹಾಗೂ ಚುನಾವಣಾ ಗುರುತಿನ ಚೀಟಿಯನ್ನು ಹೊಂದಿದ್ದರು ಎಂದರೆ ಸರಿ. ನನ್ನ ಮೃತ ತಂದೆ ಆಧಾರ ಕಾರ್ಡನ್ನು ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ. ನನ್ನ ತಂದೆಯವರು ಸದರಿ ಅಪಘಾತವಾದ ಸಂದರ್ಭದಲ್ಲಿ ಎಷ್ಟು ವಯಸ್ಸಿನವರಾಗಿದ್ದರು ಎಂದು ಸತ್ಯ ತಿಳಿದು ಬರುತ್ತದೆ ಎಂದು ಹೇಳಿ ಉದ್ದೇಶ ಪೂರ್ವಕವಾಗಿ ಅವರ ಆಧಾರ ಕಾರ್ಡ ಹಾಗೂ ಚುನಾವಣಾ ಗುರುತಿನ ಚೀಟಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ನನ್ನ ತಾಯಿಗಿಂತ 7-8 ವರ್ಷ ದೊಡ್ಡವರಾಗಿದ್ದರು. ನಾವುಗಳು ಹೆಚ್ಚಿನ ಪರಿಹಾರದ ಹಣವನ್ನು ಪಡೆಯಲು ವೈದ್ಯಕೀಯ ದಾಖಲೆಗಳನ್ನು ಸೃಷ್ಟಿ ಮಾಡಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.